# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಆಗಸ್ಟ್ ೧೦, ೨೦೧೮ರ ಶುಕ್ರವಾರದಂದು ನಡೆದ ಕಾರ್ಯಕಾರಿ ಸಮಿತಿ ೧೯೬ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೦೭. ಡಾ. ಪಿ. ಮಹಾದೇವಯ್ಯ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಿಷಯ : ದಿನಾಂಕ ೦೯.೦೭.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು (ಅನುಬಂಧ-೦೧).

ನಿರ್ಣಯ : ದಿನಾಂಕ ೦೯.೦೭.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೦೯.೦೭.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು (ಅನುಬಂಧ-೦೨).

ನಿರ್ಣಯ : ದಿನಾಂಕ ೦೯.೦೭.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೫ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

**೧೯೬. ೦೧ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿಯ ಶೋಧನಾ ಸಮಿತಿಗೆ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.**

ಟಿಪ್ಪಣಿ : ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಇಡಿ೧೯ ಕೆವಿವಿ ೨೦೧೮ ದಿನಾಂಕ ೨೪.೦೭.೨೦೧೮ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತ ಕುಲಪತಿಯವರ ಅವಧಿಯು ಸೆಪ್ಟೆಂಬರ್ ೦೮, ೨೦೧೮ಕ್ಕೆ ಮುಕ್ತಾಯಗೊಳ್ಳಲಿದ್ದು, ಆ ಸ್ಥಾನಕ್ಕೆ ನೂತನ ಕುಲಪತಿಗಳ ನೇಮಕಾತಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕಾಯ್ದೆ ೧೯೯೧ ಸೆಕ್ಷನ್ ೧೩(೨)ರ ಅನ್ವಯ ಒಂದು ಶೋಧನಾ ಸಮಿತಿಯನ್ನು ರಚಿಸಬೇಕಾಗಿದೆ ಎಂದು ತಿಳಿಸಿದ್ದಾರೆ. ಈ ಶೋಧನಾ ಸಮಿತಿಗೆ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯು ಶಿಫಾರಸ್ಸು ಮಾಡುವ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಿ ಹೆಸರನ್ನು ಕೂಡಲೇ ಕಳುಹಿಸುವಂತೆ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಶೋಧನಾ ಸಮಿತಿಗೆ ಒಬ್ಬ ಸದಸ್ಯರ ಹೆಸರನ್ನು ಸೂಚಿಸಲು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿಗಾಗಿ ಶೋಧನಾ ಸಮಿತಿಗೆ ಒಬ್ಬರನ್ನು ನಾಮ ನಿರ್ದೇಶನ ಮಾಡಲು ಮಾನ್ಯ ಕುಲಪತಿಗಳಿಗೆ ಸಭೆ ಅಧಿಕಾರ ನೀಡಿತು.

೧೯೬. ೦೨ ವಿಶ್ವವಿದ್ಯಾಲಯದ ತಾತ್ಕಾಲಿಕ ಸಿಬ್ಬಂದಿ ಹಾಗೂ ದಿನಗೂಲಿ ಸಿಬ್ಬಂದಿಗಳ ವೇತನ ಮತ್ತು VDA ಹೆಚ್ಚಳದ ಕುರಿತು.

ನಿರ್ಣಯ : ಕರ್ನಾಟಕ ಸರ್ಕಾರದ ಕನಿಷ್ಠ ವೇತನ ಕಾಯ್ದೆ ಅಧಿಸೂಚನೆ ಸಂಖ್ಯೆ: KAE 31 LMW 2017 Date: 30-12-2017ರ ಹಿನ್ನೆಲೆಯಲ್ಲಿ ತಾತ್ಕಾಲಿಕ ಸಿಬ್ಬಂದಿಗಳ ವೇತನ ಪರಿಷ್ಕರಣೆ ಕುರಿತು ಸಮಿತಿ ರಚಿಸಿ, ನಿಯಮಾನುಸಾರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೧೯೬. ೦೩ ಶ್ರೀ ಕೆ. ಶಿವಪ್ಪ, ಕಿರಿಯ ಸಹಾಯಕ ಇವರ ಹೃದಯಾಘಾತದ ವೈದ್ಯಕೀಯ ಚಿಕಿತ್ಸೆಗಾಗಿ ಪಾವತಿಸಿದ ರೂ.೨,೫೦,೦೦೦ (ಎರಡು ಲಕ್ಷದ ಐವತ್ತು ಸಾವಿರ ರೂ. ಮಾತ್ರ) ಮೊತ್ತಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಶ್ರೀ ಕೆ. ಶಿವಪ್ಪ, ಕಿರಿಯ ಸಹಾಯಕ ಇವರ ಹೃದಯಾಘಾತದ ವೈದ್ಯಕೀಯ ಚಿಕಿತ್ಸೆಗಾಗಿ ಪಾವತಿಸಲಾದ ಮೊತ್ತ ರೂ.೨,೫೦,೦೦೦/-ಗಳಿಗೆ ಸಭೆ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೧೯೬. ೦೪ ವಿಶ್ವವಿದ್ಯಾಲಯದ ಆವರಣ ಮತ್ತು ದೇವದುರ್ಗದ ವಿಸ್ತರಣಾ ಕೇಂದ್ರಕ್ಕೆ ಎಂ.ಎ.ಪಿಎಚ್.ಡಿ ತರಗತಿಗಳಿಗೆ ಹಾಗೂ ದೈಹಿಕ ಶಿಕ್ಷಣ ಬೋಧಿಸಲು ತಾತ್ಕಾಲಿಕ ಅಧ್ಯಾಪಕರ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ತಾತ್ಕಾಲಿಕವಾಗಿ

ಅ. ಪತ್ರಿಕೋದ್ಯಮ ಅಧ್ಯಾಪಕರು – ೦೨ (ವಿದ್ಯಾರಣ್ಯ ಆವರಣ)

ಆ. ದೈಹಿಕ ಶಿಕ್ಷಣ ಅಧ್ಯಾಪಕರು – ೦೧ (ವಿದ್ಯಾರಣ್ಯ ಆವರಣ)

ಇ. ಕನ್ನಡ ಅಧ್ಯಾಪಕರು – ೦೨ (ದೇವದುರ್ಗ ಕೇಂದ್ರ)

ಈ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಅಧ್ಯಾಪಕರು – ೦೨ (ದೇವದುರ್ಗ ಕೇಂದ್ರ)

ಒಟ್ಟು ೭ ತಾತ್ಕಾಲಿಕ ಅಧ್ಯಾಪಕರ ನೇಮಕಾತಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ತಾತ್ಕಾಲಿಕ ಅಧ್ಯಾಪಕರ ಹುದ್ದೆಗಳಿಗೆ ನೇರ ಸಂದರ್ಶನ ಕೈಗೊಂಡ ಪ್ರಕ್ರಿಯೆಗೆ ಹಾಗೂ ಅರ್ಹತೆ ಪಟ್ಟಿಗೆ ಸಭೆ ಅನುಮೋದನೆ ನೀಡಿತು.

೧೯೬. ೦೫ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ, ಅಧ್ಯಯನಾಂಗಕ್ಕೆ, ವಿಸ್ತರಣಾ ಕೇಂದ್ರ ಹಾಗೂ ಪೀಠಗಳಿಗೆ ಮುಖ್ಯಸ್ಥರು/ ಉಪನಿರ್ದೇಶಕರು/ಸಂಚಾಲಕರ ನಿಯೋಜನೆಗೆ ಹಾಗೂ ಸಿಬ್ಬಂದಿ ವರ್ಗಾವಣೆಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿ.

೧. ಡಾ. ವೆಂಕಟಗಿರಿ ದಳವಾಯಿ, ಮುಖ್ಯಸ್ಥರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

೨. ಡಾ. ಎಸ್.ಎಸ್. ಅಂಗಡಿ, ಮುಖ್ಯಸ್ಥರು, ಡಾ. ಆ.ನೇ. ಉಪಾಧ್ಯೆ ವಿಸ್ತರಣಾ ಕೇಂದ್ರ, (ಭರತೇಶ ಶಿಕ್ಷಣ ಸಂಸ್ಥೆ)

೩. ಡಾ. ಅಮರೇಶ ಯತಗಲ್, ಮುಖ್ಯಸ್ಥರು, ಶಾಸನಶಾಸ್ತ್ರ ವಿಭಾಗ

೪. ಡಾ. ಸಾಂಬಮೂರ್ತಿ, ಮುಖ್ಯಸ್ಥರು, ಕನ್ನಡ ಭಾಷಾಧ್ಯಯನ ವಿಭಾಗ

೫. ಡಾ. ಎಸ್.ವೈ. ಸೋಮಶೇಖರ್, ಉಪನಿರ್ದೇಶಕರು, ಅಧ್ಯಯನಾಂಗ

೬. ಡಾ. ಮಂಜುನಾಥ ಬೇವಿನಕಟ್ಟಿ, ಸಂಚಾಲಕರು, ಹಾಲುಮತ ಅಧ್ಯಯನ ಪೀಠ

೭. ಡಾ. ಶಾಂತಪ್ಪ, ಸಂಚಾಲಕರು, ದೇವದುರ್ಗ ವಿಸ್ತರಣಾ ಕೇಂದ್ರ

೮. ಶ್ರೀ ಬಾಲಚಂದ್ರ ವಿ., ಕಿರಿಯ ಸಹಾಯಕ, ಬುಡಕಟ್ಟು ಅಧ್ಯಯನ ವಿಭಾಗ, ಇವರನ್ನು ದಿನಾಂಕ ೦೬.೦೮.೨೦೧೮ರಿಂದ ಜಾರಿಗೆ ಬರುವಂತೆ ಡಾ. ಆ.ನೇ. ಉಪಾಧ್ಯೆ ವಿಸ್ತರಣಾ ಕೇಂದ್ರ, ಬೆಳಗಾವಿಗೆ ವರ್ಗಾವಣೆ

ನಿರ್ಣಯ : ಸದರಿ ನಿಯೋಜನೆಗಳಿಗೆ ಹಾಗೂ ವರ್ಗಾವಣೆಗಳಿಗೆ ಸಭೆ ಅನುಮೋದನೆ ನೀಡಿತು.

೧೯೬. ೦೬ ಮಾನ್ಯ ಕುಲಪತಿಯವರ ನಿರ್ದೇಶನದಂತೆ ಅಕ್ಟೋಬರ್ ೫ ಮತ್ತು ೬, ೨೦೧೮ರಂದು ಬಹರೇನ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಶ್ವವಿದ್ಯಾಲಯದ ಡೀನರು, ಅಧಿಕಾರಿಗಳು ಹಾಗೂ ವಿದ್ವಾಂಸರುಗಳು ಭಾಗವಹಿಸುವುದಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದ ಅಧಿಕಾರಿಗಳು, ಡೀನರು, ಸಾಹಿತ್ಯ ಸಮ್ಮಂದಿ ವಿವಿಧ ವಿಭಾಗಗಳ ಮುಖ್ಯಸ್ಥರುಗಳು, ಪ್ರಾಧ್ಯಾಪಕರು ಹಾಗೂ ವಿದ್ವಾಂಸರು ಹೀಗೆ ಒಟ್ಟು ೧೫ಜನರು ಅಕ್ಟೋಬರ್ ೫ ಹಾಗೂ ೬, ೨೦೧೮ ರಂದು ಬಹರೇನ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿರುವ ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಸಭೆ ನಿರ್ಣಯಿಸಿತು.

ಹಾಗೂ ಸಮ್ಮೇಳನದ ಒಟ್ಟು ವೆಚ್ಚದ ಮೊತ್ತದಲ್ಲಿ ಶೇಕಡ ೨೫%ರಷ್ಟು ಸಹಾಯ ದನವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಬಹುದೆಂದು ಸಭೆ ತೀರ್ಮಾನಿಸಿತು.

೧೯೬. ೦೭ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿವಿಎ ಪ್ರಥಮ ವರ್ಷದ ಫೌಂಡೇಶನ್ ಪದವಿ ಪಠ್ಯಕ್ರಮಕ್ಕೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿವಿಎ ಪ್ರಥಮ ವರ್ಷದ ಫೌಂಡೇಶನ್ ಪದವಿ ಪಠ್ಯಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೧೯೬. ೦೮ ಅ. ವಿಶ್ವವಿದ್ಯಾಲಯದಲ್ಲಿ ಖಾಲಿ ಇದ್ದ ೩೭೧(ಜೆ) ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಮಾರ್ಚ್ ೨೭, ೨೦೧೮ರಂದು ನೂತನವಾಗಿ ನೇಮಮಾಡಿಕೊಳ್ಳಲಾಗಿತ್ತು.

ಆ. ೨೦೧೮ರ ವಿಧಾನ ಸಭೆ ಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆಯನ್ನು ಚುನಾವಣಾ ಆಯೋಗವು ಜಾರಿಗೊಳ್ಳಿಸಿದ ಹಿನ್ನೆಲೆಯಲ್ಲಿ ಏಪ್ರಿಲ್ ೦೩, ೨೦೧೮ರಂದು ಸದರಿ ನೇಮಕಾತಿ ಆದೇಶಗಳನ್ನು ಹಿಂಪಡೆಯಲಾಗಿತ್ತು.

ಇ. ಕರ್ನಾಟಕ ಉಚ್ಛನ್ಯಾಯಾಲಯ ಧಾರವಾಡ ಪೀಠದ ಮಧ್ಯಂತರ ತಡೆಯಾಜ್ಞೆ ಆದೇಶ ದಂತೆ ದಿನಾಂಕ ೧೨.೦೪.೨೦೧೮ರಿಂದ ಜಾರಿಗೆ ಬರುವಂತೆ ನೇಮಕಾತಿ ಆದೇಶಗಳನ್ನು ನೀಡಲಾಗಿದೆ.

ಈ. ಮೇಲಿನ ಹಿನ್ನೆಲೆಯಂತೆ ಸದರಿ ಸಿಬ್ಬಂದಿಗಳ ನೇಮಕಾತಿಯನ್ನು ಮಾರ್ಚ್ ೨೭, ೨೦೧೮ರಂದು ನೀಡಲಾದ ನೇಮಕಾತಿ ಆದೇಶದಂತೆ ಮೊದಲಬಾರಿ ವರದಿಮಾಡಿಕೊಂಡ ದಿನದಿಂದಲೇ ಸೇವೆಯನ್ನು ಪರಿಗಣಿಸುವ ಕುರಿತು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಸದರಿ ಸಿಬ್ಬಂದಿಗಳಿಗೆ ಉಚ್ಚನ್ಯಾಯಾಲಯ ನೀಡಿದ ತಡೆಯಾಜ್ಞೆಗೆ ಸಮ್ಮಂದಿಸಿ ಕಾನೂನು ಸಲಹೆಗಾರರು ಈಗಾಗಲೇ ಸಲಹೆ ನೀಡಿರುವರು. ಸದರಿ ನೌಕರರ ಸೇವಾ ಅವಧಿಯನ್ನು ಈ ಹಿಂದೆ ನೀಡಿದ ಆದೇಶದನ್ವಯ ಕ್ರಮಕೈಗೊಳ್ಳಲು ಸಭೆ ಅನುಮೋದಿಸಿತು.

೧೯೬. ೦೯ ದಿನಾಂಕ ೦೮.೦೮.೨೦೧೮ರಂದು ನಡೆದ ಕಾಮಗಾರಿಗಳ ಪರಿಶೀಲನಾ ಸಮಿತಿ ಸಭೆ ನಡೆವಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಕಾರ್ಯಕಾರಿ ಸಮಿತಿ ಪರಿಶೀಲನೆ ನಡೆಸಿ ವರದಿ ನೀಡಿರುವುದರಿಂದ ಅದರನ್ವಯ ಪೂರ್ಣಗೊಳಿಸಿದ ಕಾಮಗಾರಿಗಳಿಗೆ ಸಲ್ಲಿಸಿದ ಬಿಲ್ಲುಗಳಿಗೆ ಹಣ ಪಾವತಿಮಾಡಲು ಸಭೆ ತೀರ್ಮಾನಿಸಿತು.

೧೯೬. ೧೦ ತಾಂತ್ರಿಕ ವಿಭಾಗ ಪ್ರಸ್ತಾವನೆಗಳ ಬಗೆಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ತಾಂತ್ರಿಕ ವಿಭಾಗದ ಯಾವುದೇ ಕಾಮಗಾರಿ ಸಂಬಂಧ ಪಾವತಿ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲು ಸಭೆ ಸೂಚಿಸಿತು.

೧೯೬. ೧೧ ಶ್ರೀ ಶಿವಪುತ್ರ, ಕಂಪ್ಯೂಟರ್ ಆಪ್‌ರೇಟರ್ ಮತ್ತು ಶ್ರೀ ಬಿ. ವೆಂಕಟೇಶ, ಕಿರಿಯ ಸಹಾಯಕ ಅವರ ಮುಂಬಡ್ತಿ ಕೋರಿಕೆ ಬಗ್ಗೆ.

ನಿರ್ಣಯ : ಸಿಬ್ಬಂದಿಗಳ ಕೋರಿಕೆಯನ್ನು ಪರಿಶೀಲಿಸಿದ ಸಭೆಯು ಈ ಕುರಿತಂತೆ ಸದರಿ ಸಿಬ್ಬಂದಿಗಳು ನ್ಯಾಯಾಲಯದಲ್ಲಿ ಹೂಡಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದೆ ಆಗಬಹುದಾದ ತೊಡಕುಗಳಿಗೆ ಮೇಲಿನ ಸಿಬ್ಬಂದಿಗಳೇ ಜವಾಬ್ದಾರರು ಎನ್ನುವ ಷರತ್ತಿಗೊಳಪಡಿಸಿ ಪ್ರಸ್ತುತ ಅವಧಿಯಿಂದ ಜಾರಿಗೆ ಬರುವಂತೆ ಸದರಿ ಸಿಬ್ಬಂದಿಯ ಹುದ್ದೆಗಳ ಮೇಲ್ದರ್ಜೆಗೇರಿಸುವಿಕೆ ಬಗ್ಗೆ ಕ್ರಮಕೈಗೊಳ್ಳಲು ಸಭೆ ತೀರ್ಮಾನಿಸಿತು.

೧೯೬. ೧೨ ಬಿ.ಕೆ. ಪವಿತ್ರ ಪ್ರಕರಣದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಹಿಂಬಡ್ತಿ ಹೊಂದಿದ ಶ್ರೀ ಗ್ಯಾನಪ್ಪ ಬಡಿಗೇರ, ಮತ್ತು ಶ್ರೀ ರಮಾನಾಯ್ಕ ಇವರ ಮುಂಬಡ್ತಿ ಕೋರಿಕೆ ಬಗ್ಗೆ.

ನಿರ್ಣಯ : ಬಿ.ಕೆ. ಪವಿತ್ರ ಪ್ರಕರಣದ ಕುರಿತಂತೆ ಸಭೆಯು ಪರಿಶೀಲಿಸಿ ಈ ಸಂಬಂಧ ವಿಷಯ ತಜ್ಞರಾದ ಶ್ರೀ.ಕೆ.ಎಲ್.ಲೋಕನಾಥ, ನಿವೃತ್ತಿ ಜಂಟಿ ಕಾರ್ಯದರ್ಶಿಗಳು, ೩೭೧(ಜೆ)ಕೋಶ, ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆ, ಬೆಂಗಳೂರು ಅವರನ್ನೊಳಗೊಂಡ ಸಮಿತಿಯನ್ನು ರಚಿಸಿ, ನಿಯಮಾನುಸಾರ ಕ್ರಮವಹಿಸಲು ಸಭೆ ನಿರ್ಣಯಿಸಿತು.

೧೯೬. ೧೩ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಇವರ ಮಕ್ಕಳ ಆನಾರೋಗ್ಯದಿಂದಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಸಂಸ್ಥೆಯ ನಿಯೋಜನೆ ಅವಧಿಯನ್ನು ಮುಂದುವರೆಸಲು ಕೋರಿರುವ ಪತ್ರದ ಬಗ್ಗೆ.

ನಿರ್ಣಯ : ಶ್ರೀ ಕೆ.ಎಂ. ಕುಬೇರಪ್ಪ, ಅವರ ಕೋರಿಕೆಯನ್ನು ಸಭೆಯು ಪರಿಶೀಲಿಸಿ, ಮಕ್ಕಳ ಅನಾರೋಗ್ಯದ ಹಿನ್ನೆಲೆಯಲ್ಲಿ ಮಾನವೀಯತೆ ಹಾಗೂ ಅನುಕಂಪದ ಆಧಾರದ ಮೇಲೆ ನಿಯೋಜನೆ ಅವಧಿಯನ್ನು ದಿನಾಂಕ ೧೮.೦೬.೨೦೧೭ ರಿಂದ ಅನ್ವಯವಾಗುವಂತೆ ಇನ್ನೂ ಎರಡು ವರ್ಷಗಳ ಮಟ್ಟಿಗೆ (ದಿನಾಂಕ.೧೭.೦೮.೨೦೧೯ರ ವರೆಗೆ) ಮುಂದುವರೆಸಲು ಸಭೆ ನಿರ್ಣಯಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು